# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | 169 |
| **ಸದಸ್ಯರ ಹೆಸರು** | ಶ್ರೀ ಕೆ.ಎ. ತಿಪ್ಪೇಸ್ವಾಮಿ<br>(ನಾಮನಿರ್ದೇಶನ ಹೊಂದಿದವರು) |
| **ಉತ್ತರಿಸಬೇಕಾದ ದಿನಾಂಕ** | 13.09.2021. |
| **ಉತ್ತರಿಸಬೇಕಾದ ಸಚಿವರು** | ಮಾನ್ಯ ಉನ್ನತ ಶಿಕ್ಷಣ, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ & ತಂತ್ರಜ್ಞಾನ ಹಾಗೂ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು. |
| **ಪ್ರಶ್ನೆ** | **ಉತ್ತರ** |
| (ಅ) ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀನ ಇಲಾಖೆಗಳು ಯಾವುವು; (ಅವುಗಳು ನಿರ್ವಹಿಸುತ್ತಿರುವ ಕಾರ್ಯ ಮತ್ತು ವಿಧಾನಗಳ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು) | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಧೀನದಲ್ಲಿ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯವು ಕಾರ್ಯನಿರ್ವಹಿಸುತ್ತಿರುತ್ತದೆ. ಸದರಿ ನಿರ್ದೇಶನಾಲಯದ ಅಡಿಯಲ್ಲಿ ಇಲಾಖೆಯ ವಿವಿಧ ಕಾರ್ಯನೀತಿಯ ಯೋಜನೆಗಳನ್ನು ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) ಮೂಲಕ ಅನುಷ್ಠಾನಗೊಳಿಸಲಾಗುತ್ತಿದ್ದು, ಕಾರ್ಯ ವಿಧಾನದ ಸಂಪೂರ್ಣ ಮಾಹಿತಿಯನ್ನು **ಅನುಬಂಧ-01** ರಲ್ಲಿರಿಸಿದೆ. |
| (ಆ) ಆ ಇಲಾಖೆ ಅಡಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅಧೀನ ಇಲಾಖೆಗಳು ಹಮ್ಮಿಕೊಂಡಿರುವ ಕಾರ್ಯಕ್ರಮಗಳು ಯಾವುವು; (ಸಂಪೂರ್ಣ ಮಾಹಿತಿ ನೀಡುವುದು) | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀನ ಸಂಸ್ಥೆಗಳಲ್ಲಿ ಹಮ್ಮಿಕೊಳ್ಳಲಾಗಿರುವ ಕಾರ್ಯಕ್ರಮಗಳ ಸಂಪೂರ್ಣ ಮಾಹಿತಿಯನ್ನು **ಅನುಬಂಧ-02** ರಲ್ಲಿರಿಸಿದೆ. |
| (ಇ) ಈ ಅಧೀನ ಇಲಾಖೆಗಳು ಹಮ್ಮಿಕೊಂಡಿರುವ ಕಾರ್ಯಕ್ರಮ ಮತ್ತು ಯೋಜನೆಗಳಿಗೆ ಕಳೆದ 5 ವರ್ಷಗಳಿಂದ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮತ್ತು ಇತರೆ ಮೂಲಗಳಿಂದ ನೀಡಿರುವ ಅನುದಾನ ಆರ್ಥಿಕ ನೆರವು, ದೇಣಿಗೆ ಮೊತ್ತವೆಷ್ಟು; (ಸಂಪೂರ್ಣ ಮಾಹಿತಿ ನೀಡುವುದು) | ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧೀನ ಸಂಸ್ಥೆಗಳಿಗೆ ಕಳೆದ ಐದು ವರ್ಷಗಳಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರದ ಮತ್ತು ಇತರೆ ಮೂಲಗಳಿಂದ ನೀಡಿರುವ ಅನುದಾನ, ಆರ್ಥಿಕ ನೆರವು, ದೇಣಿಗೆ ಮೊತ್ತದ ಸಂಪೂರ್ಣ ಮಾಹಿತಿಯನ್ನು **ಅನುಬಂಧ-3** ರಲ್ಲಿರಿಸಿದೆ. |
| (ಈ) ಕಳೆದ 5 ವರ್ಷಗಳಲ್ಲಿ ಪಡೆದ ನೆರವನ್ನು ಈ ಅಧೀನ ಇಲಾಖೆಗಳು ಸಂಪೂರ್ಣವಾಗಿ ಬಳಸಿಕೊಂಡಿವೆಯೇ? (ಹಾಗಿದ್ದಲ್ಲಿ, ಸಂಪೂರ್ಣ ವಿವರ ನೀಡುವುದು) | ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ಹೆಚ್ಚಿನ ಎಲ್ಲಾ ಯೋಜನೆಗಳು ಮುಂದುವರೆದ ಯೋಜನೆಗಳಾಗಿದ್ದು, ಕಳೆದ ಐದು ವರ್ಷಗಳಲ್ಲಿ ಈ ಯೋಜನೆಗಳಿಗಾಗಿ ಒದಗಿಸಲಾಗಿರುವ ಅನುದಾನವನ್ನು ಯೋಜನೆಗಳು ಸಂಪೂರ್ಣ ಕಾರ್ಯಗತಗೊಳ್ಳುವ ಸಂದರ್ಭದಲ್ಲಿ ಬಳಸಿಕೊಳ್ಳಲಾಗುತ್ತಿದೆ. |

**(ಐಟಿಬಿಟಿ 59 ಎಲ್‌ಸಿಎಂ 2021)**

**(ಡಾ|| ಅಶ್ವಥ್‌ನಾರಾಯಣ ಸಿ.ಎನ್)**
ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ
ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು

# ಅನುಬಂಧ-01

1. **ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ನಿರ್ದೇಶನಾಲಯ (DIT):** ಸರ್ಕಾರದಿಂದ ಡಿಐಟಿಗೆ ವಿವಿಧ ಯೋಜನೆಯ ಅನುಷ್ಠಾನಕ್ಕಾಗಿ ಬಿಡುಗಡೆಯಾಗುವ ಅನುದಾನವನ್ನು ರಾಜ್ಯ ಹುಜೂರ್ ಖಜಾನೆಯಿಂದ K-2 ಮೂಲಕ ಸೆಳೆದು, ಸದರಿ ಅನುದಾನವನ್ನು ಸಂಬಂಧಿಸಿದ ಅನುಷ್ಠಾನಗೊಳಿಸುವ ಸಂಸ್ಥೆಗಳಾದ ಕಿಟ್ಸ್, ಕಿಯೋನಿಕ್ಸ್, ಐಐಐಟಿ-ಬೆಂಗಳೂರು, ಧಾರವಾಡ, ರಾಯಚೂರು, ಐಬಿಎಬಿ, ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್, ಮಾನವ ತಳಿಶಾಸ್ತ್ರ, SFAL ಮತ್ತು ಇತರೆ ಸಂಸ್ಥೆಗಳಿಗೆ ಬಿಡುಗಡೆ ಮಾಡಲಾಗುತ್ತದೆ. ಅನುಷ್ಠಾನಗೊಳಿಸಿದ ಸಂಸ್ಥೆಗಳಿಗೆ ಬಿಡುಗಡೆಗೊಳಿಸಲಾದ ಅನುದಾನವನ್ನು ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ವೆಚ್ಚ ಮಾಡಿರುವ ಬಗ್ಗೆ ಉಪಯೋಗಿತಾ ಪ್ರಮಾಣ ಪತ್ರವನ್ನು ಪಡೆದು, ಸರ್ಕಾರಕ್ಕೆ ಸಲ್ಲಿಸುವುದು.

2. **ಕಿಟ್ಸ್:-** ನಿರ್ದೇಶಕರು, DIT ರವರು ಕಿಟ್ಸ್‌ನ ಪದನಿಮಿತ್ತ ವ್ಯವಸ್ಥಾಪಕ ನಿರ್ದೇಶಕರಾಗಿ ಕರ್ತವ್ಯನಿರ್ವಹಿಸುತ್ತಿರುತ್ತಾರೆ. ಕಿಟ್ಸ್ ಅಡಿಯಲ್ಲಿ ನಿರ್ವಹಿಸುತ್ತಿರುವ ಕಾರ್ಯವಿವರ ಈ ಕೆಳಕಂಡಂತೆ ಇರುತ್ತದೆ:-

   - ಕಿಟ್ಸ್ ಸಂಸ್ಥೆಯಿಂದ IT, BT, ESDM, AVGC ಹಾಗೂ ಸ್ಟಾರ್ಟ್‌ಅಪ್ ವಲಯಗಳಿಗೆ ಪ್ರತ್ಯೇಕ ಕಾರ್ಯನೀತಿಯನ್ನು ಘೋಷಿಸಲಾಗಿದ್ದು, ಆಯಾ ವಲಯಕ್ಕೆ ಸಂಬಂಧಿಸಿದ ಕೈಗಾರಿಕೆಗಳಿಗೆ ರಿಯಾಯಿತಿ ಹಾಗೂ ವಿನಾಯಿತಿಯನ್ನು ನೀಡಿ ಉತ್ತೇಜಿಸಲಾಗುವುದು.
   - ಈ ಕ್ಷೇತ್ರಗಳ ಕೈಗಾರಿಕೆಗಳನ್ನು ಬೆಂಗಳೂರಿನಿಂದ ಹೊರಗಿನ ಪ್ರದೇಶಗಳಲ್ಲಿಯೂ ಸಹ, ಆದ್ಯತೆ ಮೇರೆಗೆ ಬಂಡವಾಳ ಹೂಡಿ ಕಾರ್ಯನಿರ್ವಹಿಸಲು ಹಾಗೂ ಉದ್ಯೋಗಾವಕಾಶವನ್ನು ಸೃಷ್ಟಿಸುವ ಉದ್ದೇಶವಿರುತ್ತದೆ.
   - ಈ ನಿಟ್ಟಿನಲ್ಲಿ ಕಿಟ್ಸ್ ಸಂಸ್ಥೆಯಿಂದ ಹಲವಾರು ಕಾರ್ಯಕ್ರಮ, ವ್ಯಾಪಾರ ಪ್ರದರ್ಶನ, ಸಮ್ಮೇಳನ, ಕಾರ್ಯಾಗಾರ, ವಿಚಾರ ಸಂಕೀರ್ಣ ಮುಂತಾದವುಗಳನ್ನು ಆಯೋಜಿಸಲು ಹಾಗೂ ರಾಜ್ಯದಲ್ಲಿ ಸದರಿ ವಲಯಗಳ ಅಭಿವೃದ್ಧಿಗಾಗಿ ಸಹಾಯಕವಾಗುವ ಪ್ರೋತ್ಸಾಹದಾಯಕವಾಗುವ ವಾತಾವರಣ ಸೃಷ್ಟಿಸಲಾಗುತ್ತಿದೆ.
   - ಸರ್ಕಾರ ಮತ್ತು ಕೈಗಾರಿಕೋದ್ಯಮದ ನಡುವೆ ಜ್ಞಾನಸೇತುವಾಗಿ ಕಾರ್ಯನಿರ್ವಹಿಸಲು ಹಾಗೂ ಜ್ಞಾನಾಧರಿತ ವಲಯಗಳಲ್ಲಿ ಏಳಿಗೆಯನ್ನು ಸಾಧಿಸಲು ಮತ್ತು ಹೂಡಿಕೆಗಳನ್ನು ವರ್ಧಿಸಲು Karnataka Digital Economy Mission ಅನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಸಂಸ್ಥೆಗೆ ಕಿಟ್ಸ್‌ನ ಐಟಿ ಪಾಲಿಸಿ ಲೆಕ್ಕಶೀರ್ಷಿಕೆಯಡಿಯಲ್ಲಿ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

# ಅನುಬಂಧ-2

## 01. ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್):-

- ವಲಯಾಧಾರಿತ ಕಾರ್ಯನೀತಿಗಳಾದ ಐಟಿ ಪಾಲಿಸಿ, ಬಿಟಿ ಪಾಲಿಸಿ, ಇಎಸ್‌ಡಿಎಂ ಪಾಲಿಸಿ, ಎವಿಜಿಸಿ ಪಾಲಿಸಿ, E R&D ಹಾಗೂ ಸ್ಟಾರ್ಟ್‌ಅಪ್ ಪಾಲಿಸಿಗಳನ್ನು ಘೋಷಿಸಿ, ವಿವಿಧ ಕಾರ್ಯಕ್ರಮ / ಯೋಜನೆಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.
- ರಾಜ್ಯ ಸರ್ಕಾರದಿಂದ 2015ರಲ್ಲಿ ಸ್ಟಾರ್ಟ್‌ಅಪ್ ನೀತಿಯನ್ನು ಘೋಷಿಸಲಾಗಿದ್ದು, ಸದರಿ ನೀತಿ ಅಡಿಯಲ್ಲಿ ಹಲವಾರು ಕಾರ್ಯಕ್ರಮ/ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ. ಈ ಸ್ಟಾರ್ಟ್‌ಅಪ್ ಕಾರ್ಯನೀತಿ ಅಡಿಯಲ್ಲಿ ಪ್ರಮುಖ ಕಾರ್ಯಕ್ರಮವಾದ ಐಡಿಯಾ ಟುಪಿಓಸಿ/ಎಲಿವೇಟ್ ಅಡಿಯಲ್ಲಿ 488 ಸ್ಟಾರ್ಟ್‌ಅಪ್‌ಗಳಿಗೆ ರೂ.116.00 ಕೋಟಿಗಳ Grant-in-aid ಅನುದಾನವನ್ನು ಕಲ್ಪಿಸಿ ಪ್ರೋತ್ಸಾಹಿಸಲಾಗಿದೆ. ಈ ಅನುದಾನದಿಂದ ವಿಕಸನಗೊಳ್ಳುತ್ತಿರುವ ಸಣ್ಣ ಉದ್ಯಮಿಗಳಿಗೆ ಸಹಾಯಧನವನ್ನು ನೀಡಿ, ಅವರುಗಳ ಆವಿಷ್ಕಾರಗಳನ್ನು ಅಭಿವೃದ್ಧಿ ಪಡಿಸುವ ನಿಟ್ಟಿನಲ್ಲಿ ಪ್ರೋತ್ಸಾಹಿಸಲಾಗುತ್ತಿದೆ.
- ರಾಜ್ಯದಲ್ಲಿ ಐಟಿಬಿಟಿ ವಿದ್ಯುನ್ಮಾನ ಮತ್ತು ನವೋದ್ಯಮ ವಲಯಗಳ ಉದ್ಯಮಗಳಿಂದ ಬಂಡವಾಳವನ್ನು ಆಕರ್ಷಿಸುವ ಸಲುವಾಗಿ ಬೆಂಗಳೂರು ಟೆಕ್ ಸಮ್ಮಿಟ್ ಸಮಾವೇಶವನ್ನು ಪ್ರತಿವರ್ಷವು ಆಯೋಜಿಸಲಾಗುವುದು.
- ಜಾಗತಿಕ ನಾವೀನ್ಯತೆ ಒಪ್ಪಂದದ ಉಪಕ್ರಮದಡಿಯಲ್ಲಿ ಅಂತರಾಷ್ಟ್ರೀಯ ಮಟ್ಟದಲ್ಲಿ ವಿವಿಧ ದೇಶಗಳ Consulate General / Trade Bodies ರವರೊಂದಿಗೆ ಒಪ್ಪಂದ ಮಾಡಿಕೊಂಡು ಪರಸ್ಪರ ಉದ್ಯಮ ಹಾಗೂ ನವೋದ್ಯಮಗಳ ಉತ್ತೇಜನಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿರುತ್ತದೆ.
- ವಿದ್ಯುನ್ಮಾನ ವ್ಯವಸ್ಥೆಯ ವಿನ್ಯಾಸ ಮತ್ತು ತಯಾರಿಕ [ESDM] ವಲಯಕ್ಕಾಗಿ ವಿಶೇಷ ಪ್ರೋತ್ಸಾಹಕಗಳ ಯೋಜನೆ [Special Incentives Scheme]ಯನ್ನು ಘೋಷಿಸಲಾಗಿದೆ.
- ಶಿಕ್ಷಣ ಸಂಸ್ಥೆಗಳಲ್ಲಿ ವಾಣಿಜ್ಯೋದ್ಯಮವನ್ನು ಉತ್ತೇಜಿಸುವ ಸಲುವಾಗಿ ರಾಜ್ಯಾದ್ಯಂತ 30 ಇಂಜೀನಿಯರಿಂಗ್ ಕಾಲೇಜುಗಳಲ್ಲಿ New Age Innovation Network ಯೋಜನೆಯಡಿಯಲ್ಲಿ, Incubation ವ್ಯವಸ್ಥೆಯನ್ನು ಸ್ಥಾಪಿಸಿ ವಿದ್ಯಾರ್ಥಿಗಳ ಪ್ರಾಜೆಕ್ಟ್‌ಗಳನ್ನು ಪ್ರೋತ್ಸಾಹಿಸಲಾಗುತ್ತಿದೆ.
- ದೂರಸಂಪರ್ಕ ಸೇವೆ ಮತ್ತು ಅಂತರ್ಜಾಲ ಸೇವೆ ಒದಗಿಸುವಲ್ಲಿ ಸಮಸ್ಯೆ/ ಕುಂದುಕೊರತೆಗಳನ್ನು ಪರಿಹರಿಸುವುದಕ್ಕಾಗಿ ವಿವಿಧ ಇಲಾಖೆಗಳೊಡನೆ ಸಮನ್ವಯತೆ ನಡೆಸಲು ಸಮಿತಿಗಳನ್ನು ರಚಿಸಲಾಗಿದೆ.
- ಕರ್ನಾಟಕದಲ್ಲಿರುವ ಬಹುರಾಷ್ಟ್ರೀಯ ಕಂಪನಿಗಳು [MNCs], ಜಾಗತಿಕ ಸಾಮರ್ಥ್ಯದ ಕೇಂದ್ರಗಳು [GCCs] ಹಾಗೂ ಜಾಗತಿಕ ಒಳಾಂಗಣ ಕೇಂದ್ರಗಳೊಂದಿಗೆ [GICs] ತೊಡಗಿಕೊಂಡು ಅವರ ಸಮಸ್ಯೆ/ಕುಂದುಕೊರತೆಗಳನ್ನು ಪರಿಹರಿಸುವುದಕ್ಕಾಗಿ MNC Engagement ಕೋಶವನ್ನುಸ್ಥಾಪಿಸಲಾಗಿದೆ.
- ಕೇಂದ್ರ ಸರ್ಕಾರದ ಹಾಗೂ ಕೈಗಾರಿಕೋದ್ಯಮದ ಸಹಯೋಗದೊಂದಿಗೆ ಸಾರ್ವಜನಿಕ-ಖಾಸಗಿ ಸಹಭಾಗಿತ್ವದಲ್ಲಿ ರಾಯಚೂರಿನಲ್ಲಿ Indian Institute of Information Technology ಸ್ಥಾಪನೆಯಾಗಿರುತ್ತದೆ
- ನವೋದ್ಯಮಿಗಳಿಗಾಗಿ ಪರಿಪೋಷಣಾ ಕಾರ್ಯಕ್ರಮಗಳನ್ನು ನಡೆಸಲು NASSCOM ನ ಸಹಯೋಗದೊಂದಿಗೆ ಕೆ-ಟೆಕ್ ನಾವೀನ್ಯತಾ ಹಬ್‌ನ್ನು K-wings, HSR Layout, ಬೆಂಗಳೂರಿನಲ್ಲಿ ಸ್ಥಾಪಿಸಲಾಗಿದೆ.
- ನವೋದ್ಯಮಿಗಳ ಪ್ರೋತ್ಸಾಹಕ್ಕಾಗಿ ಕೈಗಾರಿಕಾ ಸಂಘ-ಸಂಸ್ಥೆಗಳು, ಲಾಭರಹಿತ ಸಂಸ್ಥೆಗಳು ಹಾಗೂ ಶೈಕ್ಷಣಿಕ ಸಂಸ್ಥೆಗಳೊಂದಿಗೆ Grant-in aid ಅನುದಾನವನ್ನು ನೀಡಿ, ಉತ್ಕೃಷ್ಟತಾ ಕೇಂದ್ರ-8 (Centre of Excellence), ತಂತ್ರಜ್ಞಾನ ವ್ಯವಹಾರ ಪರಿಪೋಷಕ ಕೇಂದ್ರ-5 (Technology Business Incubators) ಹಾಗೂ ಸಾಮಾನ್ಯ ಉಪಕರಣಗಳ ಸೌಲಭ್ಯ-5 (Common Instrumentation Facilities) ಗಳನ್ನುಸ್ಥಾಪಿಸಲಾಗಿದೆ.
- ಸ್ಟಾರ್ಟ್‌ಅಪ್ ನೀತಿ ಅಡಿಯಲ್ಲಿ ಸ್ಟಾರ್ಟ್‌ಅಪ್‌ಗಳ ಸಾಮಾಜಿಕ ಸವಾಲುಗಳಿಗೆ ಆವಿಷ್ಕಾರವುಳ್ಳ ಪರಿಹಾರಗಳನ್ನು ಒದಗಿಸಲು ಗ್ರ್ಯಾಂಡ್ ಚಾಲೆಂಜ್ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಆರು ಬಾರಿ ಅರ್ಜಿಗಳನ್ನು ಆಹ್ವಾನಿಸಿ, ಪರಿಹಾರಗಳನ್ನು ಒಟ್ಟು 24 ಸ್ಟಾರ್ಟ್‌ಅಪ್‌ಗಳನ್ನು ಆಯ್ಕೆ ಮಾಡಿ ಅನುದಾನವನ್ನು ನೀಡಲಾಗಿರುತ್ತದೆ.

- ನಾವೀನ್ಯತೆಯುಳ್ಳ ಉದಯೋನ್ಮುಖ ತಂತ್ರಜ್ಞಾನಗಳ ಪ್ರೋತ್ಸಾಹನೆಗಾಗಿ ಸನ್ಮಾನ್ಯ ಮುಖ್ಯಮಂತ್ರಿಯವರ ಅಧ್ಯಕ್ಷತೆಯಲ್ಲಿ ಕರ್ನಾಟಕ ನಾವೀನ್ಯತಾ ಪ್ರಾಧಿಕಾರವನ್ನು (Karnataka Innovation Authority) ಸ್ಥಾಪಿಸಲಾಗಿದೆ.
- ಬಯೋ ಸ್ಟಾರ್ಟ್ ಅಪ್ ಗಳಿಗಾಗಿ ಸುಸ್ಥಿರ ಉದ್ಯಮಶೀಲತೆ ಹಾಗೂ ಉದ್ಯಮ ಅಭಿವೃದ್ಧಿ ನಿಧಿಯನ್ನು ಸ್ಥಾಪಿಸಲಾಗಿದೆ.
- ಜೈವಿಕ ತಂತ್ರಜ್ಞಾನದಲ್ಲಿ ಬಯೋ ಟೆಕ್ನಾಲಜಿ ಸ್ಕಿಲ್ ಎನ್ ಹಾನ್ಸ್‌ಮೆಂಟ್ ಕಾರ್ಯಕ್ರಮದ 3ನೇ ತಂಡದಲ್ಲಿ 220 ವಿದ್ಯಾರ್ಥಿಗಳಿಗೆ ಪ್ರವೇಶ ನೀಡಲಾಗಿದೆ.
- ಬಿಟಿ, ಇಎಸ್‌ಡಿಎಂ ಮತ್ತು ಎವಿಜಿಸಿ ಕ್ಷೇತ್ರಕ್ಕೆ ಆಧಾರಿತ ಹೂಡಿಕೆಯನ್ನು ಆಕರ್ಷಿಸಲು ಹಾಗೂ ಧನಸಹಾಯ ನೀಡಿ, ನವೋದ್ಯಮಗಳನ್ನು ಅಭಿವೃದ್ಧಿಪಡಿಸಲು 3 ವಿವಿಧ ಬಂಡವಾಳ ನಿಧಿಗಳನ್ನು ಸ್ಥಾಪಿಸಲಾಗಿದೆ (KARSEMVEN, BIO-VENTURE ಹಾಗೂ AVGC)
- ಕರ್ನಾಟಕ ಸ್ಟಾರ್ಟ್‌ಅಪ್ ಅಡ್ವಾನ್ಸ್‌ಮೆಂಟ್ ಕಾರ್ಯಕ್ರಮವನ್ನು (ಕೆ-ಸ್ಯಾಪ್) ಸಿ-ಕ್ಯಾಂಪ್ ಸಹಭಾಗಿತ್ವದಲ್ಲಿ ನವೋದ್ಯಮಗಳಿಗಾಗಿ ಮಾರ್ಗದರ್ಶನ ನೀಡಲು ಹಮ್ಮಿಕೊಳ್ಳಲಾಗಿದೆ.
- ಕೇಂದ್ರ ಸರ್ಕಾರದ ಅನುದಾನಿತ ಯೋಜನೆಯಾದ ಇಎಸ್‌ಡಿಎಂ ಕೌಶಲ್ಯಾಭಿವೃದ್ಧಿ ಕಾರ್ಯಕ್ರಮದಡಿಯಲ್ಲಿ ವಿವಿಧ 69 ಕೋರ್ಸ್‌ಗಳಿಗೆ ತರಬೇತಿಯನ್ನು ನೀಡಲಾಗುತ್ತಿದೆ.
- ರಾಜ್ಯಾದ್ಯಂತ 9 ಹೊಸ ಕಾಲೇಜುಗಳಲ್ಲಿ ಡಿಜಿಟಲ್ ಆರ್ಟ್ ಕಾಲೇಜ್ 2.0 (DAC-2.0) ಅನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ರಾಜ್ಯದ ಮೊಟ್ಟ ಮೊದಲ ಕರ್ನಾಟಕ ಬಯೋ ಎಕಾನಮಿ ವರದಿಯನ್ನು ಬಿಡುಗಡೆ ಮಾಡಲಾಗಿದೆ. ವ್ಯಾಕ್ಸಿನ್ ತಯಾರಿಕಾ, ಜೈವಿಕ ತಯಾರಿಕ ಹಬ್ ಮುಂತಾದ ವಲಯಗಳನ್ನು ಪ್ರೋತ್ಸಾಹಿಸುವುದರ ಮೂಲಕ ರಾಜ್ಯದ ಜೈವಿಕ ಆರ್ಥಿಕತೆಯನ್ನು ಮುಂಬರುವ ಐದು ವರ್ಷಗಳಲ್ಲಿ ಈಗಿರುವ 22.6 ಬಿಲಿಯನ್ ಅಮೇರಿಕನ್ ಡಾಲರ್‌ನಿಂದ 50 ಬಿಲಿಯನ್ ರಷ್ಟು ವರ್ಧಿಸಲು ಇಲಾಖೆಯು ಹಲವು ಉಪಕ್ರಮಗಳನ್ನು ರೂಪಿಸುತ್ತಿದೆ.

**02. ಕರ್ನಾಟಕ ರಾಜ್ಯ ವಿದ್ಯುನ್ಮಾನ, ಅಭಿವೃದ್ಧಿ ನಿಗಮ ನಿಯಮಿತ (ಕಿಯೋನಿಕ್ಸ್):-**

- ಸರ್ಕಾರವು ಎಸ್‌ಸಿಎಸ್‌ಪಿ/ಟಿಎಸ್‌ಪಿ ಯೋಜನೆಯಡಿ ಒದಗಿಸಿರುವ ಅನುದಾನದಡಿ ಎಸ್.ಸಿ ಮತ್ತು ಎಸ್.ಟಿ ಅಭ್ಯರ್ಥಿಗಳಿಗೆ ಹೈಯರ್ ಎಂಡ್ ಕಂಪ್ಯೂಟರ್ ತರಬೇತಿಗಳನ್ನು ನೀಡಲು ರೂ.2.13 ಕೋಟಿಗಳ ಯೋಜನೆಯನ್ನು ರೂಪಿಸಲಾಗಿದೆ ಮತ್ತು ತರಬೇತಿ ಕಾರ್ಯಕ್ರಮಗಳು ಪ್ರಗತಿಯಲ್ಲಿವೆ.
- ಮಂಗಳೂರಿನಲ್ಲಿ 3.25 ಎಕರೆ ಭೂಮಿಯಲ್ಲಿ ಐಟಿ ಪಾರ್ಕ್ ಸ್ಥಾಪಿಸಲು ಪಿಪಿಪಿ ಮಾದರಿಯಲ್ಲಿ ಡಿಪಿಆರ್ ನ್ನು ಸಿದ್ಧಪಡಿಸಲಾಗಿದೆ.
- ಶಿವಮೊಗ್ಗದ ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಹಾಲಿಯಿರುವ 2.5 ಎಕರೆಯಲ್ಲಿ ಐಟಿ ಪಾರ್ಕ್‌ನ 2ನೇ ಹಂತದ ಅನೆಕ್ಸ್‌ನ್ನು ನಿರ್ಮಿಸಲು ಡಿಪಿಆರ್ ಸಿದ್ಧಪಡಿಸಲಾಗಿದೆ.
- ಬೆಂಗಳೂರಿನ ಕೆಂಪೇಗೌಡ ಅಂತರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪವಿರುವ ಹೈಟೆಕ್ ಡಿಫೆನ್ಸ್ ಮತ್ತು ಏರೋಸ್ಪೇಸ್ ಪಾರ್ಕ್ (ಐಟಿ ಸೆಕ್ಟರ್)ನಲ್ಲಿ 12 ಎಕರೆ ಪ್ರದೇಶದಲ್ಲಿ ಗ್ಲೋಬಲ್ ವಿಲೇಜ್ ಐಟಿ ಪಾರ್ಕ್ ಸ್ಥಾಪಿಸಲು ಪಿಪಿಪಿ ಮಾದರಿಯಲ್ಲಿ ಡಿಪಿಆರ್‌ನ್ನು ಸಿದ್ಧಪಡಿಸಲಾಗಿದೆ.

**03. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್):-**

- ವಿಜ್ಞಾನ ಕೇಂದ್ರ ಮತ್ತು ತಾರಾಲಯಗಳ ಸ್ಥಾಪನೆ
- ವಿಜ್ಞಾನ ಜನಸಮೂಹ ಹಾಗೂ ಶೈಕ್ಷಣಿಕ ಕಾರ್ಯಕ್ರಮಗಳನ್ನು ವಿವಿಧ ವೈಜ್ಞಾನಿಕ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸುವುದು.
- ನ್ಯಾನೊ ಸಮ್ಮೇಳನದ ಆಯೋಜನೆ
- ಮಿನಿ ವಿಜ್ಞಾನ ಸಂಪನ್ಮೂಲ ಕೇಂದ್ರಗಳ ಸ್ಥಾಪನೆ ಮತ್ತು ನಿರ್ವಹಣೆ
- ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹದ (VGST) ಯೋಜನೆಗಳನ್ನು ಉನ್ನತ ಶಿಕ್ಷಣ ಸಂಸ್ಥೆಗಳ ಮೂಲಕ ಅನುಷ್ಠಾನಗೊಳಿಸುವುದು.
- ಸಂಚಾರಿ ತಾರಾಲಯ ಯೋಜನೆಯ ಅನುಷ್ಠಾನ.
- ವಿಜ್ಞಾನ ಮತ್ತು ಇಂಜಿನಿಯರಿಂಗ್ ನಲ್ಲಿ ಪಿಹೆಚ್.ಡಿ. ಸಂಶೋಧನೆಗೆ ಡಿಎಸ್ ಟಿ ಶಿಷ್ಯವೇತನ ನೀಡುವುದು.
- ವಿಜ್ಞಾನ ಮಾಲಿಕೆ-500 ಎಂಬ ವಿನೂತನ ಆಕಾಶವಾಣಿ ಕಾರ್ಯಕ್ರಮದ ಅನುಷ್ಠಾನ.
- ವಿಜ್ಞಾನ ಪ್ರತಿಭಾ ಶೋಧನೆ ಕಾರ್ಯಕ್ರಮದ ಅನುಷ್ಠಾನ.

## 04. ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ:-

- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಧಾನ ಸಮ್ಮೇಳನ, ಕನ್ನಡ ಸಮ್ಮೇಳನ, ವಿಜ್ಞಾನ ಸಂವಹನ ಕಾರ್ಯಾಗಾರ, ಗೋಷ್ಠಿ, ಸಂವಾದ ಮತ್ತು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ವಿಜ್ಞಾನ ದಿನಗಳ ಆಯೋಜನೆ.
- ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಪ್ರಶಸ್ತಿಗಳ ನೀಡುವಿಕೆ.
- ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ವಿಶೇಷ ಉಪನ್ಯಾಸಗಳು, ವಿಜ್ಞಾನ ಮಾದರಿ ವಸ್ತು ಪ್ರದರ್ಶನ, ಪ್ರಬಂಧ ಸ್ಪರ್ಧೆ ಮತ್ತು ಆವಿಷ್ಕಾರಗಳಿಗೆ ವೇದಿಕೆ ಕಲ್ಪಿಸುವುದು.
- ವಿಜ್ಞಾನ ಲೋಕ ದ್ವೈಮಾಸಿಕ ಸಂಚಿಕೆ, ವಾರ್ತಾ ಪತ್ರ & ಪುಸ್ತಕಗಳ ಪ್ರಕಟಣೆ, ಕಾರ್ಯಕ್ರಮ ಮೌಲ್ಯಮಾಪನ, ನೀತಿ ನಿರೂಪಣೆ (policy/Strategy paper) ಪತ್ರ ಪ್ರಕಟಣೆ
- ಡಿಜಿಟಲ್ ಮಾಹಿತಿ ಅಭಿವೃದ್ಧಿ (Digital Content Generation) ಮತ್ತು ವಿಜ್ಞಾನ ಕಿರು ಚಿತ್ರಗಳ ಪ್ರದರ್ಶನ.

## 05. ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ:-

- ರಾಜ್ಯದ ಅಭಿವೃದ್ಧಿ ಹಾಗೂ ಯೋಜನಾ ಕಾರ್ಯಗಳಿಗೆ ಸಂಬಂಧಿಸಿದ ಹಲವಾರು ರೀತಿಯ ಭೌಗೋಳಿಕ ದತ್ತಾಂಶ, ಮಾಹಿತಿ ಹಾಗೂ ಸೇವೆಗಳು ನೈಸರ್ಗಿಕ ಸಂಪನ್ಮೂಲಗಳ ದತ್ತಾಂಶ ವ್ಯವಸ್ಥೆಯನಿರ್ವಹಣೆ.
- ಮಳೆ ನೀರು ಕೊಯ್ಲು ಪದ್ಧತಿ, ಸಾಂಪ್ರದಾಯಿಕ ನೀರು ಸಂಗ್ರಹಣಾ ವ್ಯವಸ್ಥೆ, ಪುರಾತನ ಸ್ಮಾರಕಗಳನ್ನು ಪುನರ್ಜೀವನಗೊಳಿಸುವುದು.
- ಡಿಜಿಟಲ್ 3D ಮಾದರಿ ತಯಾರಿಕೆ, IP ಕೋಶದ ಅನುಷ್ಠಾನ, ಈ-ಕಲಿಕಾ ಕೇಂದ್ರದ ಸ್ಥಾಪನೆ, ಸಂಶೋಧನಾ ಅಭಿವೃದ್ಧಿ, ಸೆಂಟರ್ ಆಫ್ ಎಕ್ಸಲೆನ್ಸ್ - ಸೈಬರ್ ಸೆಕ್ಯೂರಿಟಿ & ಏರೋಸ್ಪೇಸ್ & ಡಿಫೆನ್ಸ್, ಪರಿಶಿಷ್ಟ ಜಾತಿ, ಮತ್ತು ಪರಿಶಿಷ್ಟ ಪಂಗಡ ಕೋಶ, ಸ್ವಸಹಾಯ ಗುಂಪು ಸ್ಥಾಪನೆ ಹಾಗೂ ರಾಜ್ಯದ ವಿಜ್ಞಾನಿ ಮತ್ತು ಇಂಜಿನಿಯರ್‌ಗಳನ್ನು ಪ್ರೋತ್ಸಾಹಿಸಿ ಪ್ರತಿ ವರ್ಷ ಹಲವು ಪ್ರಶಸ್ತಿಗಳನ್ನು ನೀಡುವುದು.

## 06. ಜವಾಹರ್ ಲಾಲ್ ನೆಹರು ತಾರಾಲಯ:-

- ತಾರಾಲಯವು ಆಕಾಶಮಂದಿರದ ಪ್ರದರ್ಶನಗಳು, ನಕ್ಷತ್ರ ವೀಕ್ಷಣೆ, ಖಗೋಳ ವಿಜ್ಞಾನ ಕೇಳಿ-ತಿಳಿ, ವಿಜ್ಞಾನ ಚಲನಚಿತ್ರಗಳ ಪ್ರದರ್ಶನ, ಭಿತ್ತಿಚಿತ್ರಗಳ ಪ್ರದರ್ಶನ, ವಿಜ್ಞಾನ ಕೂಟ, ಉಪನ್ಯಾಸಗಳು, ಖಗೋಳಿಯ ವಿದ್ಯಮಾನಗಳ ವೀಕ್ಷಣೆ ಮುಂತಾದ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮಗಳನ್ನು ವರ್ಷದುದ್ದಕ್ಕೂ ಆಯೋಜಿಸುವುದು.
- ಶೂನ್ಯ ನೆರಳಿನ ದಿನ, ವಿಶೇಷ ಉಪನ್ಯಾಸಗಳು, ತಾರಾಲಯ ಪ್ರವಾಸ, ಪ್ರಕಟಣೆಗಳ ಮೂಲಕ ಖಗೋಳ ವಿಜ್ಞಾನ ಮತ್ತು ಇತರೆ ವಿಜ್ಞಾನ ವಿಷಯಗಳ ಜನಪ್ರಿಯಗೊಳಿಸುವುದು.
- ಬೇಸಿಗೆ ಶಿಬಿರಗಳು (SEED), ವಾರಾಂತ್ಯದ ವಿಜ್ಞಾನ ತರಗತಿಗಳು (SOW), ರಿಸರ್ಚ್ ಎಜುಕೇಷನ್ ಅಡ್ವಾನ್ಸ್‌ಮೆಂಟ್ ಪ್ರೋಗ್ರಾಂ (REAP), ವಿಜ್ಞಾನ ಪ್ರದರ್ಶನಗಳು, ಕಮ್ಮಟಗಳ ಮುಖಾಂತರ ಅನೌಪಚಾರಿಕ ವಿಜ್ಞಾನ ಶಿಕ್ಷಣ ನೀಡುವಿಕೆ.

## 07. ಬೆಂಗಳೂರು ವಿಜ್ಞಾನ ಗ್ಯಾಲರಿ:-

- ವಿಜ್ಞಾನ ಗ್ಯಾಲರಿಯು ಈ ಕೆಳಕಂಡ ಆನ್ಲೈನ್ ಪ್ರದರ್ಶನಗಳನ್ನು ಆಯೋಜಿಸಿದ್ದು, ಒಟ್ಟು 50,000 ಕ್ಕೂ ಹೆಚ್ಚು ಜನರು ಇವುಗಳ ಪ್ರಯೋಜನ ಪಡೆದಿರುತ್ತಾರೆ.
- ಎಲಿಮೆಂಟ್ಸ್ (Elements): ಅಕ್ಟೋಬರ್ 05, 2019 ರಿಂದ ಅಕ್ಟೋಬರ್ 11, 2019 ರವರೆಗೆ
- ಆವೃತ (Submerge): ಡಿಸೆಂಬರ್ 15, 2019 ರಿಂದ ಜನವರಿ 30, 2020 ರವರೆಗೆ
- ಸಸ್ಯಲೋಕ (Phytopia): ಆಗಸ್ಟ್ 21, 2020 ರಿಂದ ಆಗಸ್ಟ್ 30, 2020 ರವರೆಗೆ
- ಕಂಟೇಜಿಯನ್ (Contagion): ಏಪ್ರಿಲ್ 30, 2021 ರಿಂದ ಜೂನ್ 13, 2021 ರವರೆಗೆ

<u>ಅನುಬಂಧ-3</u>

## 01. ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗ:-

### <u>ರಾಜ್ಯ ಸರ್ಕಾರದಿಂದ ಒದಗಿಸಲಾಗಿರುವ ಅನುದಾನದ ವಿವರ</u>

(ರೂ. ಲಕ್ಷಗಳಲ್ಲಿ)

| ಕ್ರ. ಸಂ | ಸಂಸ್ಥೆ | ಹಮ್ಮಿಕೊಂಡಿರುವ ಯೋಜನೆ/ ಕಾರ್ಯಕ್ರಮ | 2016-17 | 2017-18 | 2018-19 | 2019-20 | 2020-21 |
|---|---|---|---|---|---|---|---|
| 1 | ಕರ್ನಾಟಕ ನಾವೀನ್ಯತೆ ಮತ್ತು ತಂತ್ರಜ್ಞಾನ ಸೊಸೈಟಿ (ಕಿಟ್ಸ್) | ಐಟಿ ಪಾಲಿಸಿ | 1885.00 | 1781.00 | 2193.50 | 450.00 | 715.00 |
| | | ಐಟಿ ಪಾಲಿಸಿ ಎಸ್‌ಸಿ ಎಸ್‌ಪಿ | - | - | - | 300.00 | 214.00 |
| | | ಐಟಿ ಪಾಲಿಸಿ ಟಿಎಸ್‌ಪಿ | - | - | - | 100.00 | 71.00 |
| | | ಬಿಟಿ ಪಾಲಿಸಿ | 3385.00 | 2180.00 | 2936.25 | 311.86 | 300.00 |
| | | ಕಿಟ್ಸ್ ಅಡ್ಮಿನಿಸ್ಟ್ರೇಷನ್ | 300.00 | 400.00 | 400.00 | 500.00 | 450.00 |
| | | ಎವಿಜಿಸಿ ಪಾಲಿಸಿ | 690.00 | 850.00 | 1200.00 | 1350.00 | 100.00 |
| | | ಹಾರ್ಡ್‌ ವೇರ್ ಪಾಲಿಸಿ | 200.00 | 200.00 | 1000.00 | 1000.00 | 10000.00 |
| | | ಸ್ಟಾರ್ಟ್ ಅಪ್ ಪಾಲಿಸಿ | 5923.00 | 5575.00 | 5289.00 | 1619.00 | 750.00 |
| 2 | ಕಿಯೋನಿಕ್ಸ್ | ಐಟಿ ಪಾಲಿಸಿ | - | 100.00 | 12.50 | 50.00 | - |
| | | ಐಟಿ ಪಾಲಿಸಿ ಎಸ್‌ಸಿಎಸ್‌ಪಿ | 580.00 | 841.00 | 639.00 | - | - |
| | | ಐಟಿ ಪಾಲಿಸಿ ಟಿಎಸ್‌ಪಿ | 232.00 | 336.00 | 255.00 | - | - |
| | | ಇಕ್ವಿಟಿ ಷೇರ್ | 200.00 | 210.00 | 160.00 | 160.00 | 100.00 |
| | | ರೂರಲ್ ವೈಫೈ | - | 1010.00 | - | - | - |
| 3 | ಐಬಿಎಬಿ | ಐಬಿಎಬಿ ಫೈನಾನ್ಸ್ ಅಸಿಸ್ಟೆಂಟ್ | 805.00 | 3200.00 | 800.00 | 300.00 | 600.00 |
| | | ಬಿಟಿ ಪಾಲಿಸಿ | - | - | 28.75 | 205.00 | - |
| 4 | ಐಐಐಟಿ | ಐಐಐಟಿ- ಬೆಂಗಳೂರು | 200.00 | 1050.00 | 275.00 | 230.00 | 195.00 |
| | | ಐಐಐಟಿ-ಧಾರವಾಡ | 1000.00 | 1000.00 | 425.00 | - | 1270.00 |
| | | ಐಐಐಟಿ-ರಾಯಚೂರು | - | - | - | - | 735.00 |
| 5 | ಬೆಂಗಳೂರು ಬಯೋ ಇನ್ನೋವೇಷನ್ ಸೆಂಟರ್ | ಬಿಟಿ ಪಾಲಿಸಿ | - | - | 125.00 | 250.00 | - |
| 6 | ಮಾನವ ತಳಿ ಶಾಸ್ತ್ರ | ಬಿಟಿ ಪಾಲಿಸಿ | - | - | 125.00 | 347.32 | - |
| 7 | ಕೆ.ಎಸ್.ಆರ್.ಎಸ್.ಎ.ಸಿ | ಇತರೆ ವೆಚ್ಚಗಳು | 1400.00 | 2143.00 | 1900.00 | - | - |
| 8 | ಮಾಹಿತಿ ತಂತ್ರಜ್ಞಾನ ಮತ್ತು ಕೌಶಲ್ಯಾಭಿವೃದ್ಧಿ ಸೊಸೈಟಿ | ರೂರಲ್ ವೈಫೈ | | 3990.00 | - | - | - |
| | | ಐಟಿ ಪಾಲಿಸಿ (ಚೇತನ) | - | 10.00 | - | - | - |
| | | ಐಟಿ ಪಾಲಿಸಿ (ಯುವಯುಗ) | - | 50.00 | - | - | - |
| | **ಒಟ್ಟು ಬಿಡುಗಡೆಯಾದ ಅನುದಾನ** | | **16,800.00** | **24,926.00** | **17,765.00** | **7173.18** | **15,500.00** |

### <u>ಕೇಂದ್ರ ಸರ್ಕಾರದಿಂದ ಒದಗಿಸಲಾದ ಅನುದಾನ:-</u>

| ಕ್ರ ಸಂ | ಯೋಜನೆಯ ವಿವರ | ವರ್ಷ | ಬಿಡುಗಡೆಯಾದ ಅನುದಾನ |
|---|---|---|---|
| 1 | Biotechnology Skill Enhancement Program | 2017-18 | 216.00 |
| 2 | Skill Vigyan Program | 2020-21 | 78.8 |
| 3 | ESDM Skill development programme | 2018-19 | 208.38 |
| | | 2019-20 | 267.79 |
| | | 2020-21 | 311.21 |
| | | | |

## 02. ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗ:-

(ರೂ. ಲಕ್ಷಗಳಲ್ಲಿ)

| ವರ್ಷ | ಕೆಸ್ಟೆಪ್ಸ್ | ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ | | ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರಜ್ಞಾನ ಮಂಡಳಿ | | ಜವಾಹರ್ ಲಾಲ್ ನೆಹರು ತಾರಾಲಯ | | ಬೆಂಗಳೂರು ವಿಜ್ಞಾನ ಗ್ಯಾಲರಿ |
|---|---|---|---|---|---|---|---|---|
| | ರಾಜ್ಯದ ಅನುದಾನ | ಕೇಂದ್ರದ ಅನುದಾನ | ರಾಜ್ಯದ ಅನುದಾನ | ಕೇಂದ್ರದ ಅನುದಾನ | ರಾಜ್ಯದ ಅನುದಾನ | ರಾಜ್ಯದ ಅನುದಾನ | ಖಾಸಗಿ ಅನುದಾನ | ರಾಜ್ಯದ ಅನುದಾನ |
| 2016-17 | 5026.61 | - | 663.00 | 288.86 | 316.3 | 100.00 | - | 50.00 |
| 2017-18 | 5764 | - | 640.00 | 381.61 | 520.37 | 270.00 | 0.21 | 750.00 |
| 2018-19 | 5928 | - | 525.00 | 320.25 | 570.53 | 250.00 | 9.48 | 750.00 |
| 2019-20 | 4257.5 | - | 525.00 | 415.86 | 479.33 | 200.00 | 0.04 | 100.00 |
| 2020-21 | 3057.88 | 8.65 | 81.25 | 522.44 | 368.82 | 150.00 | 4.19 | 1000.00 |

* * * *